# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 518 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30.01.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯತ್‌ಗಳಿಗೆ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಮತ್ತು ಹೋರ್ಡಿಂಗ್ ಅಳವಡಿಕೆಗೆ ಅನುಮತಿ ನೀಡುವ ಅಧಿಕಾರವಿದೆಯೇ; ಇದ್ದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಯಾವ ಪ್ರಕರಣದಲ್ಲಿ ಅವಕಾಶ ನೀಡಲಾಗಿದೆ; ಇಲ್ಲದಿದ್ದಲ್ಲಿ, ಅನುಮತಿ ನೀಡುವ ಪ್ರಾಧಿಕಾರ ಯಾವುದು; ಯಾವ ನಿಯಮದಡಿ ಅವಕಾಶ ಕಲ್ಪಿಸಲಾಗಿದೆ; | ಹೌದು.<br><br>ಕರ್ನಾಟಕ ಪಂಚಾಯತ್ ರಾಜ್ (ಜಾಹೀರಾತು ಮತ್ತು ಫಲಕಗಳ ಅಳವಡಿಕೆಯ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ) (ಮಾದರಿ) ಉಪವಿಧಿಗಳು, 2013 ರ ಉಪವಿಧಿ 4 ರಲ್ಲಿ ಗ್ರಾಮ ಪಂಚಾಯತಿಯು ಪ್ರದೇಶದೊಳಗೆ ಜಾಹೀರಾತುಗಳನ್ನು, ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು, ಅಳವಡಿಸಲು, ನಿಲ್ಲಿಸಲು, ನಾಟಲು ಅನುಮತಿ ನೀಡುವ ಪ್ರಾಧಿಕಾರ ಗ್ರಾಮ ಪಂಚಾಯತಿಯಾಗಿರುತ್ತದೆ. |
| (ಆ) | ಬ್ಯಾನರ್, ಫ್ಲೆಕ್ಸ್, ಬಂಟಿಂಗ್ಸ್ ಹೋರ್ಡಿಂಗ್ ಅಳವಡಿಕೆಗೆ ಇರುವ ನಿಯಮಗಳು ಮತ್ತು ಶುಲ್ಕಗಳು ಯಾವುವು; ಇದಕ್ಕೆ ಸಂಬಂಧಿಸಿದ ಆದೇಶ/ನಿಯಮದ ಪ್ರತಿಯನ್ನು ಒದಗಿಸುವುದು; | ಜಾಹೀರಾತು ಮತ್ತು ಫಲಕಗಳನ್ನು ಅಳವಡಿಸಲು ಕರ್ನಾಟಕ ಪಂಚಾಯತ್ ರಾಜ್ (ಜಾಹೀರಾತು ಮತ್ತು ಫಲಕಗಳ ಅಳವಡಿಕೆಯ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ) (ಮಾದರಿ) ಉಪವಿಧಿಗಳು, 2013 ಅನ್ನು ರಚಿಸಲಾಗಿದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 (3) (ಜೆ) ರಲ್ಲಿ ನಿಯಮಿಸಬಹುದಾದಂಥ ಯಾವುದೇ ಇತರೆ ಶುಲ್ಕವನ್ನು ಗ್ರಾಮ ಪಂಚಾಯತಿಯು ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ಶುಲ್ಕಗಳನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಜಾಹೀರಾತು ಮತ್ತು ಫಲಕಗಳನ್ನು ಅಳವಡಿಸಲು ಶುಲ್ಕವನ್ನು ನಿರ್ಧರಿಸಿಕೊಂಡು ಗ್ರಾಮ ಪಂಚಾಯತಿಗಳು ವಿಧಿಸಬಹುದಾಗಿದೆ.<br><br>ಜಾಹೀರಾತು ಮತ್ತು ಫಲಕಗಳನ್ನು ಅಳವಡಿಕೆಯ ಉಪವಿಧಿಗಳ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಇ) | ರಸ್ತೆ ಬದಿಯಲ್ಲಿ ಖಾಯಂ ಆಗಿ ಅಳವಡಿಸುವ ಹೋರ್ಡಿಂಗ್ ಗೆ ಸರ್ಕಾರವು ಏಜೆನ್ಸಿಯನ್ನು ಗೊತ್ತು ಮಾಡಿ ಅವರಿಗೆ ಲೈಸನ್ಸ್ ನೀಡಿದೆಯೇ? (ಪಟ್ಟಿಯನ್ನು ಜಿಲ್ಲಾವಾರು ಒದಗಿಸುವುದು) | ಗ್ರಾಮ ಪಂಚಾಯತಿಯು ಪ್ರದೇಶದೊಳಗೆ ರಸ್ತೆ ಬದಿಯಲ್ಲಿ ಖಾಯಂ ಆಗಿ ಅಳವಡಿಸುವ ಹೋರ್ಡಿಂಗ್‌ಗೆ ಸರ್ಕಾರವು ಏಜೆನ್ಸಿಯನ್ನು ಗೊತ್ತು ಮಾಡಿ ಅವರಿಗೆ ಲೈಸನ್ಸ್ ನೀಡಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಗ್ರಾಅಪ 106 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ತಿದ್ದುಪಡಿ

25

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ : ಗ್ರಾಅಪ 561 ಗ್ರಾಪಂಅ 2012, ಬೆಂಗಳೂರು, 16-02-2013**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14) ಪ್ರಕರಣ 311ನ್ನು ಓದಿಕೊಂಡಂತೆ ಪ್ರಕರಣ 316ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನಂತೆ ಕರ್ನಾಟಕ ಪಂಚಾಯತ್ ರಾಜ್ (ಜಾಹೀರಾತು ಮತ್ತು ಫಲಕಗಳ ಅಳವಡಿಕೆಯ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ) (ಮಾದರಿ ಉಪವಿಧಿಗಳು), 2012ನ್ನು ಪ್ರಸ್ತಾಪಿಸಿ ಸದರಿ ಪ್ರಕರಣದ ಉಪ ಪ್ರಕರಣ (1)ರ ಅಗತ್ಯದಂತೆ ಕರಡನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 561 ಗ್ರಾಪಂಅ 2012, ದಿನಾಂಕ: 7.1.2013ರ ಮೂಲಕ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆ ಭಾಗ-IVA ಸಂಖ್ಯೆ: 16 ದಿನಾಂಕ: 7.1.2013ರಲ್ಲಿ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ:

ಮತ್ತು ದಿನಾಂಕ: 7.1.2013ರ ವಿಶೇಷ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ:

ಸದರಿ ಕರಡು ಮಾದರಿ ಉಪವಿಧಿಗಳ ಬಗ್ಗೆ ಸ್ವೀಕೃತವಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ,

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ (ಅಧಿನಿಯಮ ಸಂಖ್ಯೆ 14) ಪ್ರಕರಣ 311ನ್ನು ಓದಿಕೊಂಡಂತೆ ಪ್ರಕರಣ 316ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಮಾದರಿ ಉಪವಿಧಿಗಳನ್ನು ರಚಿಸುತ್ತದೆ. –

## ಮಾದರಿ ಉಪವಿಧಿಗಳು

1. **ಶೀರ್ಷಿಕೆ ಮತ್ತು ಪ್ರಾರಂಭ** – (1) ಈ ಉಪವಿಧಿಗಳನ್ನು **ಕರ್ನಾಟಕ ಪಂಚಾಯತ್ ರಾಜ್** (**ಜಾಹೀರಾತು ಮತ್ತು ಫಲಕಗಳ ಅಳವಡಿಕೆಯ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ**) (**ಮಾದರಿ ಉಪವಿಧಿಗಳು**), **2013** ಎಂದು ಕರೆಯತಕ್ಕದ್ದು.

   (2) ಈ ಉಪವಿಧಿಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು** – ಈ ಉಪವಿಧಿಗಳಿಗೆ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ:-

   (ಅ) "ಅಧಿನಿಯಮ" ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)

   (ಆ) "ಸಕ್ಷಮ ಪ್ರಾಧಿಕಾರ" ಎಂದರೆ ಈ ಉಪವಿಧಿಗಳ ಉದ್ದೇಶಕ್ಕಾಗಿ ಸಂಬಂಧಪಟ್ಟ ಗ್ರಾಮ ಪಂಚಾಯತಿ.

   (ಇ) "ಗ್ರಾಮ ಪಂಚಾಯತಿ" ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993 ರ ಕರ್ನಾಟಕ ಅಧಿನಿಯಮ 14) ರಡಿಯಲ್ಲಿ ರಚಿಸಿರುವ ಗ್ರಾಮ ಪಂಚಾಯತಿ.

   (ಈ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

   (ಉ) "ಜಾಹೀರಾತು" ಎಂದರೆ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ವಾಣಿಜ್ಯಾತ್ಮಕ ದೃಷ್ಟಿಯಿಂದ

ಪ್ರೋತ್ಸಾಹಿಸಲು ಯಾವುದೇ ಘೋಷಣೆ ಅಥವಾ ಶಬ್ದ, ಅಕ್ಷರ, ಮಾದರಿ, ಆಕಾರ ಅಥವಾ ಇವೆಲ್ಲವುಗಳನ್ನು ಜೋಡಿಸಿರುವ ಲಾಂಛನ, ಇವುಗಳ ಮೂಲಕ ನಿರ್ದೇಶಿಸುವ ಫಲಕಗಳು, ಬ್ಯಾನರ್‌ಗಳು, ತಾತ್ಕಾಲಿಕ ಕಮಾನುಗಳು, ಎಲೆಕ್ಟ್ರಾನಿಕ್ ಪ್ರದರ್ಶನ ನಾಮಫಲಕಗಳು, ನಿರ್ದೇಶನಗಳ ಫಲಕಗಳು, ಬಲೂನ್‌ಗಳು ಅಥವಾ ಯಾವುದೇ ರೀತಿಯ ಕಣ್ಣಿಗೆ ಕಾಣುವ ಅಥವಾ ಕೇಳುವಂತಹ ಮಾಧ್ಯಮ ಇವುಗಳನ್ನೊಳಗೊಂಡಿರುತ್ತದೆ. ಇವುಗಳ ವರ್ಗೀಕರಣದ ಬಗ್ಗೆ ಈ ನಿರೂಪಣೆಯಲ್ಲಿ ತಿಳಿಸಲಾಗಿರುತ್ತದೆ.

(ಊ) "ಫಲಕಗಳ ಜಾಹೀರಾತು" ಎಂದರೆ ಪ್ರಚಾರದ ದೃಷ್ಟಿಯಿಂದ ಅಥವಾ ಮಾಹಿತಿ ನೀಡಿ ಜನರನ್ನು ಒಂದು ಸ್ಥಳ, ವ್ಯಕ್ತಿಗಳಿರುವಲ್ಲಿಗೆ, ಸಾರ್ವಜನಿಕ ಮನರಂಜನಾ ಕಾರ್ಯಕ್ರಮಕ್ಕೆ ಅಥವಾ ಮಾರಾಟಕ್ಕಿರುವ ವಸ್ತುಗಳ ವಿಷಯದಲ್ಲಿ ಆಕರ್ಷಿಸುವ ದೃಷ್ಟಿಯಿಂದ, ನೆಲದ ಮೇಲೆ ಅಥವಾ ಕಟ್ಟಡದ ಮೇಲ್ಭಾಗ, ಗೋಡೆಯ ಮೇಲೆ ಅಥವಾ ಪೆರಾಪೆಟ್ ಅಥವಾ ಅದರ ಮೇಲ್ಭಾಗದಲ್ಲಿ ಇರುವ ವಿನ್ಯಾಸದ ಮೇಲ್ಮೈಯಲ್ಲಿ ಯಾವುದೇ ಚಿಹ್ನೆ, ಅಕ್ಷರ ಅಥವಾ ರೇಖಾ ಚಿತ್ರದ ಮೂಲಕ ಯಾವುದೇ ರೀತಿಯಲ್ಲಿ, ಆದರೆ ಹೊರಾಂಗಣದಲ್ಲಿ ಮಾತ್ರ ಪ್ರದರ್ಶಿಸುವ ಜಾಹೀರಾತು.

(ಋ) "ಎಲೆಕ್ಟ್ರಾನಿಕ್ ಪ್ರದರ್ಶನ" ಎಂದರೆ ವಿದ್ಯುತ್‌ಚ್ಛಕ್ತಿ ಸಹಾಯದಿಂದ ಪ್ರದರ್ಶಿಸುವ ಜಾಹೀರಾತು ಪ್ರದರ್ಶನ. ಎಲೆಕ್ಟ್ರಾನಿಕ್ ಅಥವಾ ವಿದ್ಯುತ್ ತಂತ್ರ ಎಂದರೆ ನಿಯಾನ್ ಲೈಟ್‌ಗಳು ಎಲ್‌ಇಡಿ ಅಥವಾ ಎಲ್‌ಸಿಡಿ ಇವುಗಳ ಮೂಲಕ ಪಡೆಯುವ ಜಾಹೀರಾತುಗಳು.

(ಎ) "ಪ್ರಕಾಶಿತವಲ್ಲದ ಜಾಹೀರಾತು ಫಲಕ" ಎಂದರೆ ಜಾಹೀರಾತು ಫಲಕವನ್ನು ಬೆಳಗಿಸಲು ಅದರ ಎದುರಿಗೆ ವಿದ್ಯುತ್ ದೀಪವಿಲ್ಲದ ಫಲಕ

(ಏ) "ಪ್ರಕಾಶಿತ ಜಾಹೀರಾತು ಫಲಕ" ಎಂದರೆ ವಿದ್ಯುತ್ ದೀಪಗಳನ್ನು ಹೊಂದಿದ್ದು, ರಾತ್ರಿಯ ಸಮಯದಲ್ಲಿ ದೀಪಗಳನ್ನು ಬೆಳಗಿಸುವ ಮೂಲಕ ಪ್ರಕಾಶಗೊಳ್ಳುವ ಸೂರ್ಯಾಸ್ತದ ನಂತರವೂ ಗೋಚರಿಸುವ ಜಾಹೀರಾತು ಫಲಕ.

(ಐ) "ಸಾರ್ವಜನಿಕ ಸ್ಥಳ" ಎಂದರೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖಾಸಗಿ ಸ್ವತ್ತಲ್ಲದ ಸಾರ್ವಜನಿಕರ ಬಳಕೆ ಅಥವಾ ಉಪಯೋಗಕ್ಕೆ ಅವಕಾಶವಿರುವಂತಹ ಸ್ಥಳ.

(ಒ) "ಖಾಸಗಿ ಸ್ಥಳ" ಎಂದರೆ ಸಾರ್ವಜನಿಕರು ಹೋಗಲು ಅವಕಾಶವಿಲ್ಲದ ಹಾಗೂ ಇತರೆ ಸ್ಥಳಗಳನ್ನು ಹೊರತುಪಡಿಸಿದ ಅಂದರೆ ಬೀದಿಗಳು, ಹೆದ್ದಾರಿಗಳು, ರೆಸ್ಟೋರೆಂಟ್‌ಗಳು, ಟಾವರೆನ್ಸ್ ರಾತ್ರಿ ಕ್ಲಬ್‌ಗಳು, ಶಾಲೆಗಳು, ಆಸ್ಪತ್ರೆಗಳು, ಅಪಾರ್ಟ್‌ಮೆಂಟ್‌ಗಳ ಸಾಮಾನ್ಯ ಪ್ರದೇಶಗಳು, ಹೋಟೆಲ್‌ಗಳು, ಮೋಟೇಲುಗಳು, ಕಚೇರಿ ಕಟ್ಟಡಗಳು, ಸಾರಿಗೆ ವ್ಯವಸ್ಥೆಗಳು ಮತ್ತು ಅಂಗಡಿಗಳು.

(ಓ) "ಜಾಹೀರಾತು ತೆರಿಗೆ" ಅಂದರೆ ಜಾಹೀರಾತು/ಜಾಹೀರಾತು ಫಲಕಗಳ ಮೇಲೆ ಗ್ರಾಮ ಪಂಚಾಯತಿಗಳು ವಿಧಿಸುವ ತೆರಿಗೆ.

(ಔ) "ಅರ್ಜಿದಾರ" ಎಂದರೆ ಜಾಹೀರಾತು ಮತ್ತು ಜಾಹೀರಾತು ಫಲಕವನ್ನು ಪ್ರದರ್ಶಿಸಲು ಅನುಮತಿ ಕೋರುವ ಒಬ್ಬ ವ್ಯಕ್ತಿ, ನೋಂದಣಿಯಾದ ಸೇವಾ ಸಂಸ್ಥೆ, ಪಾಲುದಾರಿಕೆ ಅಥವಾ ವ್ಯಾಪಾರ ಸಂಸ್ಥೆ.

(ಅಂ) "ವಿನೈಲ್ ಅಥವಾ ಫ್ಲೆಕ್ಸ್ ಜಾಹೀರಾತು" ಎಂದರೆ ಫಲಕದ ಮೇಲೆ ಚಾಚಿದ ವಿನೈಲ್ ಹಾಳೆಯ ಮೇಲಿನ ಕೈಮುದ್ರಿತ ಅಥವಾ ಗಣಕಮುದ್ರಿತ ಜಾಹೀರಾತು.

(ಅಃ) "ಬ್ಯಾನರ್ ಜಾಹೀರಾತು" ಎಂದರೆ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ಗಮನ ಸೆಳೆಯುವುದಕ್ಕಾಗಿ ಯಾವುದೇ ಜಾಹೀರಾತು ಅಥವಾ ಘೋಷಣೆ ಅಥವಾ ಲಿಖಿತ ವಿಷಯವಿರುವ ವಸ್ತ್ರದ ತುಂಡು ಅಥವಾ ಬಗ್ಗುವ ಗುಣವುಳ್ಳ ವಸ್ತು.

(ಕ) "ಅರ್ಜಿನಮೂನೆ" ಎಂದರೆ ಈ ಉಪವಿಧಿಗಳಿಗೆ ಲಗತ್ತಿಸಿರುವ ನಮೂನೆ.

(ಖ) ಈ ಉಪವಿಧಿಗಳಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಪದಗಳು ಅಧಿನಿಯಮದಲ್ಲಿ ನೀಡಿರುವ ಅರ್ಥಗಳನ್ನೆ ಹೊಂದಿರತಕ್ಕದ್ದು.

**3. ಜಾಹೀರಾತು ಮತ್ತು ಜಾಹೀರಾತು ಫಲಕಗಳ ನಿಷೇಧ** – ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅನುಮತಿಯಿಲ್ಲದೆ ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಯಾವುದೇ ಜಾಹೀರಾತು ಅಥವಾ ಜಾಹೀರಾತು ಫಲಕಗಳನ್ನು ಪ್ರದರ್ಶಿಸತಕ್ಕದ್ದಲ್ಲ, ನಿಲ್ಲಿಸತಕ್ಕದ್ದಲ್ಲ, ನಾಟತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ.

**4. ಅನುಮತಿ ನೀಡುವ ವಿಧಾನ** – (1) ಪಂಚಾಯಿತಿ ಪ್ರದೇಶದೊಳಗೆ ಜಾಹೀರಾತುಗಳನ್ನು/ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು, ಅಳವಡಿಸಲು, ನಿಲ್ಲಿಸಲು, ನಾಟಲು, ಉಳಿಸಿಕೊಳ್ಳಲು ಇಚ್ಛಿಸುವ ಯಾವುದೇ ಅರ್ಜಿದಾರರು ಜಾಹೀರಾತಿನ ಪೂರ್ಣ ವಿವರಗಳೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಪ್ರತಿ ಗ್ರಾಮ ಪಂಚಾಯಿತಿಯು ಅರ್ಜಿಯನ್ನು ಸ್ವೀಕರಿಸಿದ 30 ದಿನಗಳೊಳಗೆ ವಿಷಯವನ್ನು ತನ್ನ ಮಾಸಿಕ ಸಭೆಯಲ್ಲಿ ಮಂಡಿಸತಕ್ಕದ್ದು ಮತ್ತು ತೀರ್ಮಾನದ ನಂತರ ಅರ್ಜಿದಾರನಿಗೆ ಉದ್ದೇಶಿತ ಜಾಹೀರಾತಿನ/ಜಾಹೀರಾತು ಫಲಕದ ಸಂಬಂಧ ನಿಗದಿಪಡಿಸಿದ ಹಾಗೂ ಪಾವತಿಸಬೇಕಾದ ತೆರಿಗೆ ಮೊತ್ತ (ಇನ್ನು ಮುಂದೆ ಜಾಹೀರಾತು ತೆರಿಗೆ ಎಂದು ಉಲ್ಲೇಖಿಸಿದೆ) ದ ಬಗ್ಗೆ ಸೂಚನೆ ನೀಡತಕ್ಕದ್ದು. ಅಂತಹ ಸೂಚನೆಯನ್ನು ಗ್ರಾಮ ಪಂಚಾಯಿತಿಯು ಅರ್ಜಿದಾರನಿಗೆ ಮೂರು ಕೆಲಸದ ದಿನಗಳೊಳಗೆ ನೀಡತಕ್ಕದ್ದು.

(3) ಅರ್ಜಿದಾರನು ಗ್ರಾಮ ಪಂಚಾಯತಿಯು ನೀಡಿದ ಸೂಚನೆಯು ಸ್ವೀಕೃತವಾದ 15 ದಿನಗಳೊಳಗೆ ಪೂರ್ಣ ತೆರಿಗೆಯನ್ನು ಪಾವತಿಸತಕ್ಕದ್ದು. ಜಾಹೀರಾತು ಫಲಕವನ್ನು ಅನುಮೋದಿತ ಸ್ಥಳದಲ್ಲಿ ನಿಲ್ಲಿಸಲು ಅನುಮತಿ ನೀಡುವ ಮುನ್ನ ಅರ್ಜಿದಾರನು ಗ್ರಾಮ ಪಂಚಾಯತಿಗೆ ಜಾಹೀರಾತು ಫಲಕ ಮತ್ತು ಆಧಾರದ ಕಂಬಗಳ ಗಾತ್ರ ಮತ್ತು ಅಳತೆ ಇತ್ಯಾದಿ ಮತ್ತು ವಿನ್ಯಾಸ ಮತ್ತು ಜಾಹೀರಾತಿನ ಬಣ್ಣ ಇತ್ಯಾದಿ ವಿವರಗಳನ್ನು ಒಳಗೊಂಡ ವಿನ್ಯಾಸದ ಪ್ರತಿಯನ್ನು ಸಲ್ಲಿಸತಕ್ಕದ್ದು ಮತ್ತು ಬ್ಯಾಕ್‌ಗ್ರೌಂಡ್‌ಗೆ ಹೊಂದಿಕೊಳ್ಳದ ಹಾಗೂ ಸದಭಿರುಚಿಗೆ ಹಾಗೂ ಸಾರ್ವಜನಿಕ ನೈತಿಕತೆಗೆ ಧಕ್ಕೆ ತರುವಂತಹ ಜಾಹೀರಾತುಗಳನ್ನು/ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಅನುಮತಿ ನೀಡತಕ್ಕದ್ದಲ್ಲ. ತದನಂತರ ಗ್ರಾಮ ಪಂಚಾಯತಿಯು ಜಾಹೀರಾತಿಗೆ ಅನುಮತಿ ನೀಡಲು ಅಥವಾ ಜಾಹೀರಾತನ್ನು ನವೀಕರಿಸಲು ಮುಂದಿನ ಗ್ರಾಮ ಪಂಚಾಯತಿಯ ಸಭೆಯಲ್ಲಿ ಮಂಡಿಸಿ ಆದೇಶ ಹೊರಡಿಸತಕ್ಕದ್ದು. ಅನುಮತಿ ನೀಡಿದ ಜಾಹೀರಾತಿನ ಒಂದು ನಕಲು ಪ್ರತಿಯನ್ನು ಅರ್ಜಿದಾರನು ಗ್ರಾಮ ಪಂಚಾಯತಿಗೆ ನೀಡತಕ್ಕದ್ದು ಮತ್ತು ಅದರ ಮೇಲೆ ಜಾಹೀರಾತು ತೆರಿಗೆ ಪಾವತಿಸಿದ ಮತ್ತು ಅನುಮತಿ ನೀಡಿದ ಮೊಹರನ್ನು ಹಾಕತಕ್ಕದ್ದು.

(4) ಸಾರ್ವಜನಿಕ ಆಕ್ಷೇಪಣೆಗಳನ್ನು ಕರೆದು ಅಂತಿಮಗೊಳಿಸುವ ನಿಬಂಧನೆಗೆ ಒಳಪಟ್ಟು, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಜಾಹೀರಾತು/ಜಾಹೀರಾತು ಫಲಕಗಳ ಪ್ರದರ್ಶನಕ್ಕೆ ಸೂಕ್ತವೆಂದು ತಾನು ಪರಿಗಣಿಸುವ ಪ್ರದರ್ಶಕ ಸ್ಥಳಗಳನ್ನು ಗ್ರಾಮ ಪಂಚಾಯಿತಿಯು ಅಧಿಸೂಚಿಸತಕ್ಕದ್ದು. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಈ ಉಪವಿಧಿಗಳಲ್ಲಿ ನಿಗಧಿಪಡಿಸಿದ ಮೂಲ ದರಗಳಿಗಿಂತ ಕಡಿಮೆಯಿಲ್ಲದ ಮೊತ್ತಕ್ಕೆ ಟೆಂಡರ್ ಕರೆದ ನಂತರ ಈ ಪ್ರದರ್ಶಕ ಸ್ಥಳಗಳನ್ನು ಒಂದು ವರ್ಷದ ಅವಧಿಗೆ ಹಂಚತಕ್ಕದ್ದು. ಮುಂದುವರೆದು, ಈ ಪ್ರದರ್ಶಕದ ಸ್ಥಳಗಳನ್ನು ಬೈಲಾ ಸಂಖ್ಯೆ 5ರಲ್ಲಿ ನಿಗದಿಪಡಿಸಿರುವ ಎಲ್ಲಾ ನಿಬಂಧನೆಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಹಂಚಿಕೆ ಮಾಡತಕ್ಕದ್ದು.

(5) ಅನುಮತಿ ಅವಧಿಯು ಏಪ್ರಿಲ್ 1ನೇ ದಿನಾಂಕದಿಂದ ಮುಂದಿನ ವರ್ಷದ ಮಾರ್ಚ್ 31ರವರೆಗೆ

ಒಂದು ವರ್ಷದ ಅವಧಿಯದ್ದಾಗಿರತಕ್ಕದ್ದು ಹಾಗೂ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದಂತೆ ನವೀಕರಿಸಬಹುದಾಗಿರುತ್ತದೆ.

5. **ಅನುಮತಿ ನೀಡಲು ನಿಬಂಧನೆಗಳು** – (1) ಗ್ರಾಮ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಐತಿಹಾಸಿಕ ಸ್ಥಳ, ಸ್ಮಾರಕ ಅಥವಾ ಸಾರ್ವಜನಿಕ ಉದ್ಯಾನವನ ಅಥವಾ ಪೂಜಾ ಸ್ಥಳಗಳಲ್ಲಿ ಯಾವುದೇ ಜಾಹೀರಾತು/ ಜಾಹೀರಾತು ಫಲಕಗಳನ್ನು ನಿಲ್ಲಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ನಾಟತಕ್ಕದ್ದಲ್ಲ, ಉಳಿಸಿಕೊಳ್ಳತಕ್ಕದ್ದಲ್ಲ, ಅಥವಾ ಅಳವಡಿಸತಕ್ಕದ್ದಲ್ಲ ಅಥವಾ ನಿಲ್ಲಿಸಲು, ಪ್ರದರ್ಶಿಸಲು, ನಾಟಲು, ಉಳಿಸಿಕೊಳ್ಳಲು ಅಥವಾ ಅಳವಡಿಸಲು ಅವಕಾಶ ನೀಡತಕ್ಕದ್ದಲ್ಲ.

(2) (i) ಗ್ರಾಮ ಪಂಚಾಯತಿಯು ಅನುಮೋದಿಸಿರುವುದಕ್ಕೆ ವ್ಯತಿರಿಕ್ತವಾದ ಮಾದರಿ, ನಮೂನೆ ಅಥವಾ ರೀತಿಯಲ್ಲಿ ಯಾವುದೇ ಜಾಹೀರಾತನ್ನು ಪ್ರದರ್ಶಿಸಲು ವಾಹನಗಳನ್ನು ಬಳಸತಕ್ಕದ್ದಲ್ಲ.

(ii) ಯಾವುದೇ ವಾಹನದ ಮೇಲೆ ಸಾಗಿಸುವ ಜಾಹೀರಾತು ಫಲಕಗಳು ಅಥವಾ ನೋಟೀಸ್‌ಗಳು ಯಾವುದೇ ಕಾರಣಕ್ಕೂ ವಾಹನದ ಉದ್ದ ಮತ್ತು ಅಗಲಕ್ಕಿಂತ ಹೊರ ಚಾಚಿರತಕ್ಕದ್ದಲ್ಲ ಹಾಗೂ ಅವುಗಳನ್ನು ವಾಹನದ ರಿಜಿಸ್ಟ್ರೇಷನ್ ಗುರುತು ಅಥವಾ ವಾಹನದ ಕಡ್ಡಾಯ ದೀಪಗಳನ್ನಾಗಲಿ ಮರೆಮಾಡತಕ್ಕದ್ದಲ್ಲ ಅಥವಾ ವಾಹನದ ಸವಾರ ಅಥವಾ ಚಾಲಕನಿಗೆ ಅಡ್ಡಿ ಉಂಟುಮಾಡತಕ್ಕದ್ದಲ್ಲ.

(3) (ಎ) ಜಾಹೀರಾತು ಫಲಕಗಳನ್ನು ಗ್ರಾಮ ಪಂಚಾಯಿತಿಯು ಈ ಕೆಳಕಂಡ ನಿಬಂಧನೆಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲು ಪರಿಗಣಿಸತಕ್ಕದ್ದು.

(i) ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಈ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗದ ಖಾಸಗಿ ಭೂಮಿಯಲ್ಲಿ ಜಾಹೀರಾತು/ಜಾಹೀರಾತು ಫಲಕಗಳ ಪ್ರದರ್ಶನಕ್ಕೆ ಅನುಮತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಗ್ರಾಮ ಪಂಚಾಯಿತಿಯು ಪರಿಗಣಿಸತಕ್ಕದ್ದಲ್ಲ.

(ii) ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಲೋಕೋಪಯೋಗಿ ಇಲಾಖೆ, ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಮತ್ತು ಇತರೆ ಇಂತಹ ಅನ್ವಯಿಸುವ ಶಾಸನಬದ್ಧ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವ ನಿಬಂಧನೆಗಳಿಗೆ ಒಳಪಟ್ಟು ಎತ್ತರದ ನಿರ್ಬಂಧಗಳು ಸಂಬಂಧಪಟ್ಟ ಪ್ರಾಧಿಕಾರಗಳು ನಿಗದಿಪಡಿಸಿರುವ ಮಿತಿಗೆ ಒಳಪಡುತ್ತವೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಇದು ಭೂಮಟ್ಟದಿಂದ 40 ಅಡಿಗಳಿಗಿಂತ ಹೆಚ್ಚು ಇರತಕ್ಕದ್ದಲ್ಲ.

(iii) ಬೀದಿಯ ಕಟ್ಟಡಗಳ ಸಾಮಾನ್ಯ ಸಾಲಿನ ಹೊರಗೆ ಚಾಚಿರತಕ್ಕದ್ದಲ್ಲ ಅಥವಾ ಕಟ್ಟಡಗಳ ಸಾಲನ್ನು ನಿರ್ದಿಷ್ಟ ಪಡಿಸಿರುವ ಬೀದಿಗಳಲ್ಲಿ ಕಟ್ಟಡಗಳ ಸಾಲಿಗಿಂತ ಒಂದು ಅಡಿಗಿಂತ ಮುಂಚೆ ಚಾಚಿರತಕ್ಕದ್ದಲ್ಲ.

(iv) ಸಾರ್ವಜನಿಕ ಉದ್ಯಾನವನ ಅಥವಾ ಪೂಜಾ ಸ್ಥಳಗಳಗಳಿಂದ 90 ಅಡಿಒಳಗೆ ಇರತಕ್ಕದ್ದಲ್ಲ.

(v) ಗ್ರಾಮ ಪಂಚಾಯತಿಯ ಅಭಿಪ್ರಾಯದಲ್ಲಿ ಜಾಹೀರಾತು ಪ್ರದರ್ಶಿಸಿರುವ ಭೂಮಿ ಅಥವಾ ಕಟ್ಟಡದ ಗಾತ್ರಕ್ಕಿಂತ ಅಸಮಪ್ರಮಾಣದಲ್ಲಿ ದೊಡ್ಡದಾಗಿರತಕ್ಕದ್ದಲ್ಲ.

(vi) ಎರಡು ಜಾಹೀರಾತು ಫಲಕಗಳ ನಡುವೆ ಕನಿಷ್ಟ 100 ಮೀಟರ್‌ಗಳ ಅಂತರ ಇರತಕ್ಕದ್ದು.

(vii) ಜಾಹೀರಾತು ಫಲಕಗಳ ಗಾತ್ರ 32 ಅಡಿ X 16 ಅಡಿ ಮೀರತಕ್ಕದ್ದಲ್ಲ

(viii) ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಪಡೆದ

ವಿನ್ಯಾಸದ ದೃಢತೆಯ ಮತ್ತು ಸುರಕ್ಷತೆಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

(ix) ಜಾಹೀರಾತು ಫಲಕವು ಒಂದು ವೇಳೆ ಪ್ರಕಾಶಿತವಿದ್ದಲ್ಲಿ ಎಸ್ಕಾಂನಿಂದ ಸ್ಥಾಪನೆಯು ಯಾವುದೇ ವಿದ್ಯುತ್ ಅಪಘಾತಕ್ಕೆ ಒಳಗಾಗುವುದಿಲ್ಲವೆಂದು ಪಡೆದ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

(ಬಿ) ಸಾರ್ವಜನಿಕ ಉದ್ಯಾನವನಗಳಲ್ಲಿ ವಾಯುವಿಹಾರದ ರಸ್ತೆಗಳು ಮತ್ತು ಮನರಂಜನಾ ಸ್ಥಳಗಳಲ್ಲಿನ ಪಾದಚಾರಿ ರಸ್ತೆಗಳಲ್ಲಿ, ಪೂಜಾ ಸ್ಥಳಗಳಲ್ಲಿ, ಸಾರ್ವಜನಿಕ ಸೌಕರ್ಯದ ಸ್ಥಳಗಳಲ್ಲಿ ಅಥವಾ ಪೂರ್ಣ ವಸತಿ ಪ್ರದೇಶಗಳಲ್ಲಿ ಮತ್ತು ಹೆಚ್ಚಿನ ಸಂಚಾರ ಸ್ಥಳಗಳಲ್ಲಿ ಮತ್ತು ಪ್ರಮುಖ ರಸ್ತೆಗಳ ಜಂಕ್ಷನ್‌ಗಳಲ್ಲಿ, ಸಾಮಾನ್ಯ ನಿಯಮವಾಗಿ ಯಾವುದೇ ಜಾಹೀರಾತು ಫಲಕಗಳು ಚಲನಚಿತ್ರ ಮತ್ತು ಪೋಸ್ಟರ್ ಫಲಕಗಳನ್ನು, ರಸ್ತೆಗಳ ಜಂಕ್ಷನ್‌ಗಳಲ್ಲಿನ ಅನುಮೋದಿತ ಸ್ಥಳಗಳನ್ನು ಹೊರತುಪಡಿಸಿ ಅಳವಡಿಸಲು ಅವಕಾಶ ನೀಡತಕ್ಕದ್ದಲ್ಲ. ಯಾವುದೇ ಅನುಮೋದಿತ ಸ್ಥಳದಲ್ಲಿ ನಿಯಂತ್ರಿತವಾದ ಜಾಹೀರಾತು ಫಲಕ ಹಾಕಲು ಒಮ್ಮೆ ಅನುಮತಿ ನೀಡಿದ ನಂತರ, ಅದೇ ಗಾತ್ರ, ಸ್ಥಿತಿ, ಪಂಕ್ತೀಕರಣ ಇತ್ಯಾದಿ ಅಂಶಗಳಿಗೆ ನಂತರದ ಎಲ್ಲಾ ಜಾಹೀರಾತುದಾರರು ಬದ್ಧರಾಗಿರಬೇಕಾಗುತ್ತದೆ.

(ಸಿ) (i) ಯಾವುದೇ ಜಾಹೀರಾತು ಫಲಕಗಳ ಅನುಮೋದಿತ ಗಾತ್ರವನ್ನು ಗ್ರಾಮ ಪಂಚಾಯತಿಯು ಈ ಕೆಳಗಿನಂತೆ ನಿಗದಿ ಪಡಿಸತಕ್ಕದ್ದು.

**ದೊಡ್ಡ ಗಾತ್ರ:** ಸಮತಲ ಸ್ಥಿತಿಯಲ್ಲಿ ಮಾತ್ರ ನಿಲ್ಲಿಸುವುದು.

**ಸಣ್ಣ ಗಾತ್ರ:** ಲಂಬವಾಗಿ ಅಥವಾ ಸಮತಲವಾಗಿ ನಿಲ್ಲಿಸುವುದು.

(ii) ಸಾಮಾನ್ಯ ನಿಯಮವಾಗಿ ವಿವಿಧ ಗಾತ್ರಗಳ ವಿವೇಚನ ರಹಿತ ಮಿಶ್ರಣಗಳನ್ನೊಳಗೊಂಡ ಜಾಹೀರಾತು ಫಲಕಗಳನ್ನು ಒಂದು ಸ್ಥಳದಲ್ಲಿ ಪ್ರದರ್ಶಿಸಲು ಅವಕಾಶ ನೀಡಬಾರದು.

(ಡಿ) ಯಾವುದೇ ಒಂದು ಅನುಮೋದಿತ ಸ್ಥಳದಲ್ಲಿನ ಜಾಹೀರಾತು ಫಲಕದ ತಳ ಅಡಿಪಾಯ ಅಥವಾ ತಳ ಭಾಗವು ಅದರ ಕೆಳಗಿನ ನೆಲದ ಮೇಲ್ಮೈಯಿಂದ 8 ಅಡಿಗಿತಂ ಕಡಿಮೆಯಿಲ್ಲದ ಎತ್ತರದಲ್ಲಿರತಕ್ಕದ್ದು ಮತ್ತು ಈ ಮೊದಲು ಆ ಸ್ಥಳದಲ್ಲಿ ಹಾಕಲು ಅನುಮತಿ ನೀಡಲಾಗಿದ್ದ ಜಾಹೀರಾತು ಫಲಕದ ಪಂಕ್ತಿಯಲ್ಲಿಯೇ ಸರಿಯಾಗಿ ಇರತಕ್ಕದ್ದು.

(ಇ) ಇಂತಹ ಎಲ್ಲಾ ಜಾಹೀರಾತು ಫಲಕಗಳ ಆಧಾರಗಳು ಸ್ಟೀಲ್ ಅಥವಾ ಇತರೆ ಲೋಹ ಅಥವಾ ಒಳ್ಳೆಯ ಗುಣಮಟ್ಟದ ಮರದಿಂದ ಮಾಡಲಾಗಿದ್ದು, ಸುಮಾರು 10 ಸೆಂ.ಮೀ. X 10 ಸೆಂ.ಮೀ. ಕಡಿಮೆ ಇಲ್ಲದ ದಪ್ಪವನ್ನು ಹೊಂದಿದ್ದು, ಭೂಮಿಯಲ್ಲಿ ಗಟ್ಟಿಯಾಗಿ ಹೂತಿರತಕ್ಕದ್ದು ಮತ್ತು ಸೂಕ್ತವಾದ ಬಣ್ಣ ಹಾಕಿರತಕ್ಕದ್ದು. ಅನುಮೋದಿತ ಸ್ಥಳದಲ್ಲಿ ಜಾಹೀರಾತು ಫಲಕವನ್ನು ನಿರ್ಮಿಸುವ ಅರ್ಜಿದಾರರು ವಿನ್ಯಾಸದ ದೃಢತೆಗೆ ಸಂಬಂಧಿಸಿದಂತೆ ತಾಂತ್ರಿಕ ಪ್ರಮಾಣ ಪತ್ರ ಪಡೆದಿರತಕ್ಕದ್ದು ಮತ್ತು ಆಕಸ್ಮಿಕ ಅಪಘಾತಗಳಿಗೆ ಸಂಬಂಧಿಸಿದಂತೆ ಸೂಕ್ತ ವಿಮೆ ಪಡೆದಿರತಕ್ಕದ್ದು.

(ಎಫ್) ರಸ್ತೆಗಳಲ್ಲಿನ ಸೇತುವೆಗಳ ಪಕ್ಕದ್ದಲ್ಲಿ ಹಾಕಿರುವ ಜಾಹೀರಾತು ಫಲಕಗಳಿಗೆ ಸಂಬಂಧಿಸಿದಂತೆ, ರಸ್ತೆಗಳಲ್ಲಿನ ಸೇತುವೆಗಳ ಆಧಾರಗಳ ಎತ್ತರವನ್ನು ರಸ್ತೆ ಸೇತುವೆಯ ಕಟ್ಟೆಯ ಸಾಲಿಗೆ ಸಮನಾಗಿರುವಂತೆ ಹೊಂದಾಣಿಕೆ ಮಾಡುವುದು.

(ಜಿ) ರೈಲ್ವೆ ನಿಲ್ದಾಣ, ಬೇಲಿ ಮತ್ತು ಸಾರ್ವಜನಿಕ ಕಟ್ಟಡಗಳ ಸುತ್ತ ಹಾಕಿರುವ ಕಂಬಿಗಳ ಎದುರು ಹಾಕಲು ಅನುಮತಿ ನೀಡಿರುವ ಯಾವುದೇ ಜಾಹೀರಾತು/ ಜಾಹೀರಾತು ಫಲಕಗಳು ಇತ್ಯಾದಿಗಳು ಅಂತಹ ಬೇಲಿ ಅಥವಾ ಕಂಬಿಗಳ ಮೇಲ್ಮಟ್ಟಕ್ಕೆ ಸಮನಾಗಿರತಕ್ಕದ್ದು ಮತ್ತು ಅದಕ್ಕಿಂತ ಹೊರಗೆ ಚಾಚಿರತಕ್ಕದ್ದಲ್ಲ.

(ಹೆಚ್) ಗ್ರಾಮ ಪಂಚಾಯತಿಯು ಪರವಾನಗಿ ಪಡೆದಿರುವ ಎಲ್ಲಾ ಜಾಹೀರಾತು ಫಲಕಗಳು, ಚಲನಚಿತ್ರ

ಮತ್ತು ಪೋಸ್ಟರ್ ಫಲಕಗಳು ಇತ್ಯಾದಿ ಮತ್ತು ಅವುಗಳ ಆಧಾರಗಳನ್ನು ಎಲ್ಲಾ ಸಂದರ್ಭದಲ್ಲಿಯೂ ನಾಜೂಕಾಗಿ ಮತ್ತು ಅಚ್ಚುಕಟ್ಟಾಗಿ ನಿರ್ವಹಿಸತಕ್ಕದ್ದು ಹಾಗೂ ಅನುಮತಿ ಸಂಖ್ಯೆ, ದಿನಾಂಕ ಮತ್ತು ಅವಧಿ ಪ್ರದರ್ಶಿಸತಕ್ಕದ್ದು.

(ಐ) ಪ್ರಕಟಣೆ ಮತ್ತು ಜಾಹೀರಾತು ಅರ್ಜಿದಾರರು ತಮ್ಮ ಹೆಸರಿನ ಫಲಕವನ್ನು ಅವರು ಹಾಕಿರುವ ಎಲ್ಲಾ ಜಾಹೀರಾತು ಫಲಕಗಳ ಮೇಲ್ಭಾಗದಲ್ಲಿ ಅಂಟಿಸುವುದು.

(ಜೆ) ಒಂದು ನಿರ್ದಿಷ್ಟ ಸ್ಥಳಕ್ಕೆ ಯಾವುದೇ ಅರ್ಜಿದಾರನಿಗೆ ಒಮ್ಮೆ ನೀಡಿದ ಅನುಮತಿಯನ್ನು ಬೇರೆ ಸ್ಥಳಕ್ಕೆ ಬದಲಾಯಿಸಲು ಅಥವಾ ಬೇರೆ ಏಜೆನ್ಸಿಗೆ ವರ್ಗಾಹಿಸಲಾಗುವುದಿಲ್ಲ. ಜಾಹೀರಾತು ಫಲಕಗಳನ್ನು ಯಾವುದೇ ಕಾರಣಕ್ಕೂ ಬೇರೆ ಏಜೆನ್ಸಿಗೆ ಒಳ ಬಾಡಿಗೆಗೆ ನೀಡಲು ಅವಕಾಶವಿರುವುದಿಲ್ಲ. ಅದಾಗ್ಯೂ ಒಬ್ಬ ಅರ್ಜಿದಾರರು ವಿನೈಲ್‌ಗಳು ಮತ್ತು ಫ್ಲೆಕ್ಸ್ ಇತ್ಯಾದಿಗಳನ್ನು ಅಳವಡಿಸಲು ಸೃಜನಾತ್ಮಕ ಏಜೆನ್ಸಿಯ ಸೇವೆಯನ್ನು ಪಡೆಯಬಹುದಾಗಿದೆ.

6. **ಜಾಹೀರಾತುಗಳ ಮೇಲಿನ ಯಾವುದೇ ಸೂಚನೆ ಅಥವಾ ಗುರುತು ಅಥವಾ ಅಕ್ಷರವನ್ನು ವಿರೂಪಗೊಳಿಸುವುದನ್ನು ನಿಷೇಧಿಸಿದೆ** – ಗ್ರಾಮ ಪಂಚಾಯತಿಗಳುನಿಲ್ಲಿಸಿರುವ, ಪ್ರದರ್ಶಿಸಿರುವ, ಉಳಿಸಿರುವ ಜಾಹೀರಾತುಗಳ ಮೇಲೆ ಯಾವುದೇ ಗ್ರಾಮ ಪಂಚಾಯತಿಯು ನೀಡಿರುವ ಅನುಮತಿ/ಅನುಮೋದನೆಗೆ ಮತ್ತು ತೆರಿಗೆ ವಸೂಲಿ ಮಾಡಿರುವ ಬಗ್ಗೆ ಹಾಕಿರುವ ಸೂಚನೆ ಅಥವಾ ಗುರುತು ಅಥವಾ ಅಕ್ಷರವನ್ನು ಅಥವಾ ಕಾರ್ಯವನ್ನು ಯಾವುದೇ ವ್ಯಕ್ತಿಯು ವಿರೂಪಗೊಳಿಸತಕ್ಕದ್ದಲ್ಲ ಅಥವಾ ವಿರೂಪಗೊಳ್ಳುವಂತೆ ಮಾಡತಕ್ಕದ್ದಲ್ಲ.

7. **ಅನುಮತಿ ನಿರಾಕರಣೆ** – ಸ್ವಚ್ಛತೆ, ಸುರಕ್ಷತೆ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ಜಾಹೀರಾತು/ಜಾಹೀರಾತು ಫಲಕವನ್ನು ಪ್ರದರ್ಶಿಸಲು, ನಿಲ್ಲಿಸಲು ಅಥವಾ ಉಳಿಸಿಕೊಳ್ಳಲು ಅನುಮತಿ ನಿರಾಕರಿಸಬಹುದಾಗಿದೆ ಮತ್ತು ಅಂತಹ ಪ್ರಕರಣದಲ್ಲಿ ನಿರಾಕರಣೆಗೆ ಕಾರಣವನ್ನು ಅರ್ಜಿದಾರನಿಗೆ ಲಿಖಿತ ಮೂಲಕ ಗ್ರಾಮ ಪಂಚಾಯತಿ ಸಭೆಯ ಅಂತಹ ನಿರ್ಣಯದ ದಿನಾಂಕದಿಂದ ಮೂರು ದಿನಗಳೊಳಗಾಗಿ ತಿಳಿಸತಕ್ಕದ್ದು.

8. **ಜಾಹೀರಾತುಗಳನ್ನು ತೆಗೆದು ಹಾಕುವುದು** – (1) ಪ್ರತಿ ಗ್ರಾಮ ಪಂಚಾಯತಿಯು ಯಾವುದೇ ಆಸ್ತಿಯ ಮಾಲೀಕ ಅಥವಾ ಅನುಭವದಾರ ಅಥವಾ ಅರ್ಜಿದಾರನು ಯಾವುದೇ ವ್ಯವಹಾರ ಸಂಸ್ಥೆ ಅಥವಾ ಸಂಘಕ್ಕೆ ಅನುಮತಿಯಿಲ್ಲದೆ ಹಾಕಿರುವ ಜಾಹೀರಾತು/ಜಾಹೀರಾತು ಫಲಕವನ್ನು ತೆಗೆದು ಹಾಕಲು ಆದೇಶದ ಮೂಲಕ ತಿಳಿಸಲು ಅಧಿಕಾರ ಹೊಂದಿರತಕ್ಕದ್ದು.

(2) ಕಲಂ (1) ರಡಿಯಲ್ಲಿನ ಆದೇಶವು ಲಿಖಿತ ರೂಪದಲ್ಲಿರತಕ್ಕದ್ದು ಮತ್ತು ಪ್ರಶ್ನಿತ ಜಾಹೀರಾತಿಗೆ ಸಂಬಂಧಿಸಿದ ವ್ಯಕ್ತಿಯ ಮೇಲೆ ಜಾರಿಗೊಳಿಸತಕ್ಕದ್ದು.

(3) ಕಲಂ (1)ಕ್ಕೆ ಸಂಬಂಧಪಟ್ಟಂತೆ ಆದೇಶ ಜಾರಿ ಮಾಡಲಾಗಿರುವ ವ್ಯಕ್ತಿಯು, ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಆದೇಶವನ್ನು ಪಾಲಿಸತಕ್ಕದ್ದು.

(4) ಪಾಲನೆ ಮಾಡದಿದ್ದ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯು ಜಾಹೀರಾತು/ಜಾಹೀರಾತು ಫಲಕವನ್ನು ತೆಗೆದುಹಾಕಲು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಈ ಸಂಬಂಧ ವೆಚ್ಚವಾದ ಮೊತ್ತವನ್ನು ಕಲಂ (1)ರಲ್ಲಿ ಯಾವ ಅರ್ಜಿದಾರನ ವಿರುದ್ಧ ಆದೇಶ ಮಾಡಲಾಗಿದೆಯೋ ಅವರಿಂದ ವಸೂಲಿ ಮಾಡತಕ್ಕದ್ದು.

9. **ಮೇಲ್ಮನವಿಗಳು** – ಈ ಉಪವಿಧಿಗಳ ಅಡಿಯಲ್ಲಿ ಯಾವುದೇ ಗ್ರಾಮ ಪಂಚಾಯತಿ ಆದೇಶದಿಂದ ಬಾಧಿತನಾದ ಯಾವುದೇ ಅರ್ಜಿದಾರನು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 269 ರಡಿಯಲ್ಲಿ ತಾಲ್ಲೂಕು ಪಂಚಾಯತಿಯ

ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಸಲ್ಲಿಸತಕ್ಕದ್ದು. ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಂತಹ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸತಕ್ಕದ್ದು.

ಪರಂತು ಮೇಲ್ಮನವಿ ಸಲ್ಲಿಸುವುದರಿಂದ ಮೇಲ್ಮನವಿ ಪ್ರಾಧಿಕಾರವು ನಿರ್ದಿಷ್ಟವಾದ ತಡೆಯಾಜ್ಞೆ ಹೊರಡಿಸಿದ ಹೊರತು ಗ್ರಾಮ ಪಂಚಾಯತಿಯು ಜಾಹೀರಾತು/ಜಾಹೀರಾತು ಫಲಕಗಳು ಅಥವಾ ಇತರೆ ಪೋಸ್ಟರ್‌ಗಳನ್ನು ತೆಗೆದುಹಾಕಲು ಅಥವಾ ಗ್ರಾಮ ಪಂಚಾಯತಿಯು ಆದೇಶದ ಪಾಲನೆಗೆ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮವನ್ನು ನಿಷೇಧಿಸಿದಂತಾಗುವುದಿಲ್ಲ.

**10. ದಂಡ** – ಈ ಉಪವಿಧಿಗಳ ಅವಕಾಶಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಅಥವಾ ಉಪವಿಧಿಗಳ ಅಡಿಯಲ್ಲಿ ಕಾನೂನಿನ್ವಯ ಆತನಿಗೆ ನೀಡಲಾದ ಯಾವುದೇ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪಿದ್ದಲ್ಲಿ ರೂ.10000/– ಗಳ ದಂಡದೊಂದಿಗೆ ಶಿಕ್ಷಿಸತಕ್ಕದ್ದಾಗಿದೆ ಮತ್ತು ಉಲ್ಲಂಘನೆಯನ್ನು ಮುಂದುವರೆಸಿದಲ್ಲಿ ಮೊದಲನೇ ಉಲ್ಲಂಘನೆಯಿಂದ ಉಲ್ಲಂಘನೆ ಮುಂದುವರೆಯುವ ಅವಧಿಯವರೆಗೆ ಪ್ರತಿದಿನಕ್ಕೆ ರೂ.200/– ಗಳವರೆಗಿನ ದಂಡನೆಯನ್ನು ವಿಧಿಸಬಹುದಾಗಿದೆ.

**11. ಪ್ರತಿ ವರ್ಗಕ್ಕೆ ಸಂಬಂಧಿಸಿದಂತೆ, ದರ ಅಥವಾ ಮೊತ್ತದ ನಿರ್ಧರಣೆ ಈ ಕೆಳಕಂಡಂತೆ ಇರತಕ್ಕದ್ದು.**

| ಕ್ರ. ಸಂ. | ಜಾಹೀರಾತು/ಜಾಹೀರಾತು ಫಲಕಗಳ ವಿಧಗಳು | ಪ್ರತಿ ವರ್ಷಕ್ಕೆ ಪ್ರತಿ ಚ.ಅ.ಗೆ ತೆರಿಗೆ ಮೊತ್ತ | |
|---|---|---|---|
| 1 | ಭೂಮಿ, ಕಟ್ಟಡಗಳು, ಗೋಡೆ ಫಲಕಗಳು, ಫ್ರೇಮ್, ಕಂಬ, ರಚನೆ ಇತ್ಯಾದಿಗಳ ಮೇಲೆ ಪ್ರಕಾಶಿತವಲ್ಲದ ಜಾಹೀರಾತುಗಳು | | |
| | (ಅ) 3 ಚದರ ಅಡಿಗಳವರಗಿನ ಸ್ಥಳಕ್ಕೆ | 35 | 40 |
| | (ಆ) 3 ಚದರ ಅಡಿ ಮೇಲ್ಪಟ್ಟು ಮತ್ತು 8 ಚದರ ಅಡಿಗಳವರಗಿನ ಸ್ಥಳಕ್ಕೆ | 75 | 85 |
| | (ಇ) 8 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 80 | 95 |
| 2 | ಎತ್ತುಗಳು, ಕುದುರೆಗಳು ಅಥವಾ ಇತರೆ ಪ್ರಾಣಿಗಳು ಮನುಷ್ಯರುಗಳಿಂದ ಎಳೆಯುವ ವಾಹನಗಳು, ಬೈಸಿಕಲ್ ಮೇಲೆ ಸಾಗಿಸುವ ಪ್ರಕಾಶಿತವಲ್ಲದ ಜಾಹೀರಾತುಗಳು ಅಥವಾ ಯಾವುದೇ ವಾಹನದ ಮೇಲೆ ಸಾಗಿಸುವ ಯಾವುದೇ ರೀತಿಯ ಸಾಧನಗಳು, ಅಂಗಡಿ ಜಾಹೀರಾತುಗಳು, ಕಮಾನುಗಳು. | | |
| | (ಅ) 16 ಚದರ ಅಡಿಗಳವರಗಿನ ಸ್ಥಳಕ್ಕೆ | 150 | 175 |
| | (ಆ) 16 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 165 | 190 |
| 3 | ವಾಹನಗಳ ಮೇಲೆ ಸಾಗಿಸುವ ಪ್ರಕಾಶಿತ ಜಾಹೀರಾತು ಫಲಕಗಳು | | |
| | (ಅ) 16 ಚದರ ಅಡಿಗಳವರಗಿನ ಸ್ಥಳಕ್ಕೆ | 150 | 175 |
| | (ಆ) 16 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 165 | 190 |
| 4 | ಸ್ಯಾಂಡ್‌ವಿಚ್ ಬೋರ್ಡ್‌ಮೆನ್‌ಗಳು ಸಾಗಿಸುವ ಪ್ರಕಾಶಿತವಲ್ಲದ ಜಾಹೀರಾತು ಫಲಕಗಳು. | | |
| | (ಅ) 3 ಚದರ ಅಡಿಗೆ ಮೀರದಂತೆ ಪ್ರತಿ ಫಲಕಕ್ಕೆ | 35 | 40 |
| | (ಆ) 3 ಚದರ ಅಡಿಗೆ ಮೇಲ್ಪಟ್ಟ ಮತ್ತು 8 ಚದರ ಅಡಿಗಳವರೆಗಿನ ಫಲಕಕ್ಕೆ | 60 | 70 |
| | (ಇ) 8 ಚದರ ಅಡಿಗಿಂತ ಮೇಲ್ಪಟ್ಟ ಫಲಕಕ್ಕೆ | 75 | 85 |

| | | | |
|---|---|---|---|
| 5 | ಸ್ಯಾಂಡ್‌ವಿಚ್ ಬೋರ್ಡ್‌ಮೆನ್ ಸಾಗಿಸುವ ಪ್ರಕಾಶಿತ ಜಾಹೀರಾತು ಫಲಕಗಳು | | |
| | (ಅ) 3 ಚದರ ಅಡಿಗೆ ಮೀರದಂತೆ ಪ್ರತಿ ಫಲಕಕ್ಕೆ | 60 | 70 |
| | (ಆ) 3 ಚದರ ಅಡಿಗೆ ಮೇಲ್ಪಟ್ಟ ಮತ್ತು 8 ಚದರ ಅಡಿಗಳವರಗಿನ ಫಲಕಕ್ಕೆ | 85 | 100 |
| | (ಇ) 8ಚದರ ಅಡಿಗಿಂತ ಮೇಲ್ಪಟ್ಟ ಫಲಕಕ್ಕೆ | 90 | 110 |
| 6 | ಭೂಮಿ, ಕಟ್ಟಡಗಳು, ಗೋಡೆ ಫಲಕಗಳು, ಫ್ರೇಮ್, ಕಂಬ, ರಚನೆ ಇತ್ಯಾದಿಗಳ ಮೇಲೆ ಪ್ರಕಾಶಿತ ಜಾಹೀರಾತುಗಳು | | |
| | (ಅ) 6 ಚದರ ಅಡಿವರೆಗಿನ ಸ್ಥಳಕ್ಕೆ | 60 | 70 |
| | (ಆ) 6 ಚದರ ಅಡಿ ಮೇಲ್ಪಟ್ಟು ಮತ್ತು 16 ಚದರ ಅಡಿವರೆಗಿನ ಸ್ಥಳಕ್ಕೆ | 85 | 100 |
| | (ಇ) 16 ಚದರ ಅಡಿ ಮೇಲ್ಪಟ್ಟು ಮತ್ತು 24 ಚದರ ಅಡಿವರೆಗಿನ ಸ್ಥಳಕ್ಕೆ | 90 | 110 |
| 7 | ಸಿನೆಮಾ ಮಂದಿರಗಳ ತೆರೆಯ ಮೇಲೆ ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಲ್ಯಾಂನ್‌ಟರ್ನ್ ಸ್ಲೈಡ್‌ಗಳು ಅಥವಾ ಅದೇ ರೀತಿಯ ಉಪಕರಣಗಳ ಮುಖಾಂತರ ಪ್ರದರ್ಶಿಸುವ ಜಾಹೀರಾತುಗಳು | | |
| | (ಅ) 16 ಚದರ ಅಡಿಗಳವರೆಗಿನ ಸ್ಥಳಕ್ಕೆ | 150 | 175 |
| | (ಆ) 16 ಚದರ ಅಡಿ ಮೇಲ್ಪಟ್ಟು ಮತ್ತು 24 ಚದರ ಅಡಿವರೆಗಿನ ಸ್ಥಳಕ್ಕೆ | 165 | 190 |
| | (ಇ) 24 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 175 | 200 |
| 8 | ರಸ್ತೆಗಳ ಮೇಲೆ ನೇತು ಹಾಕಿರುವ ಪ್ರಕಾಶಿತವಲ್ಲದ ಜಾಹೀರಾತುಗಳು | | |
| | (ಅ) 3 ಚದರ ಅಡಿವರೆಗಿನ ಸ್ಥಳಕ್ಕೆ | 35 | 40 |
| | (ಆ) 3 ಚದರ ಅಡಿ ಮೇಲ್ಪಟ್ಟು ಮತ್ತು 8 ಚದರ ಅಡಿವರೆಗಿನ ಸ್ಥಳಕ್ಕೆ | 75 | 85 |
| | (ಇ) 8 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 80 | 95 |
| | ವಿ.ಸೂ:– ಐಟಂ 8ರಲ್ಲಿನ ತೆರಿಗೆಯು ಗ್ರಾಮ ಪಂಚಾಯತಿಯು ಮಾಪನದ ಅನುಸಾರ ನಿಗದಿಪಡಿಸುವ ಸ್ಥಳದ ದರಕ್ಕೆ ಹೆಚ್ಚುವರಿಯಾಗಿರುತ್ತದೆ. | | |
| 9 | ಪ್ರಕಾಶಿತವಲ್ಲದ ಜಾಹೀರಾತು ಫಲಕಗಳು. | | |
| | (ಅ) 3 ಚದರ ಅಡಿವರೆಗಿನ ಸ್ಥಳಕ್ಕೆ | 150 | 175 |
| | (ಆ) 3 ಚದರ ಅಡಿ ಮೇಲ್ಪಟ್ಟು ಮತ್ತು 8 ಚದರ ಅಡಿವರೆಗಿನ ಸ್ಥಳಕ್ಕೆ | 165 | 190 |
| | (ಇ) 8 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 190 | 210 |
| 10 | ಪ್ರಕಾಶಿತ ಜಾಹೀರಾತು ಫಲಕಗಳು | | |
| | (ಅ) 3 ಚದರ ಅಡಿವರೆಗಿನ ಸ್ಥಳಕ್ಕೆ | 175 | 200 |
| | (ಆ) 3 ಚದರ ಅಡಿ ಮೇಲ್ಪಟ್ಟು ಮತ್ತು 8 ಚದರ ಅಡಿವರೆಗಿನ ಸ್ಥಳಕ್ಕೆ | 190 | 210 |
| | (ಇ) 8 ಚದರ ಅಡಿಗಿಂತ ಮೇಲ್ಪಟ್ಟ ಸ್ಥಳಕ್ಕೆ | 200 | 250 |
| 11 | ಬ್ಯಾನರ್, ಬಂಟಿಂಗ್ ಮತ್ತು ಫ್ಲೆಕ್ಸ್ ಜಾಹೀರಾತುಗಳು | 20 | 30 |

# ನಮೂನೆ

**(ಉಪವಿಧಿ ಸಂಖ್ಯೆ 4(1)ನ್ನು ನೋಡುವುದು)**

.................................................... ಗ್ರಾಮ ಪಂಚಾಯತಿಯಲ್ಲಿ ಜಾಹೀರಾತು / ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು/ ಅಳವಡಿಸಲು ಅನುಮತಿ ಕೋರುವ ನಿಗಧಿತ ಅರ್ಜಿ

ಇವರಿಗೆ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,

........................................ ಗ್ರಾಮ ಪಂಚಾಯಿತಿ,

........................................ ತಾಲ್ಲೂಕು

........................................ ಜಿಲ್ಲೆ

ಮಾನ್ಯರೆ,

ವಿಷಯ: ........................................ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾಹೀರಾತು / ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು / ಅಳವಡಿಸಲು ಅನುಮತಿ ಕೋರಲು ಅರ್ಜಿ

ನಾನು / ನಾವು ........................................ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜಾಹೀರಾತು / ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು / ಅಳವಡಿಸಲು ಈ ಮೂಲಕ ಅನುಮತಿ ಕೋರಿ ಅರ್ಜಿ ಸಲ್ಲಿಸುತ್ತಿದ್ದೇನೆ/ವೆ.

| | | |
|---|---|---|
| 1 | ಜಾಹೀರಾತುದಾರನ ಹೆಸರು | |
| 2 | ವಿಳಾಸ | |
| 3 | ಪಾನ್ ಕಾರ್ಡ್ ವಿವರಗಳು | |
| 4 | ಜಾಹೀರಾತು/ಜಾಹೀರಾತು ಪ್ರಕಟಣಾ ಫಲಕ ಪ್ರಕಟಿಸುವ ಸ್ಥಳ | |
| 5 | ಜಾಹೀರಾತು/ಜಾಹೀರಾತು ಪ್ರಕಟಣಾ ಫಲಕದ ಗಾತ್ರ | |
| 6 | ಜಾಹೀರಾತು/ಜಾಹೀರಾತು ಪ್ರಕಟಣಾ ಫಲಕದ ವಿವರ | |
| 7 | ಜಾಹೀರಾತು/ಜಾಹೀರಾತು ಪ್ರಕಟಣಾ ಫಲಕಗಳನ್ನು ಸಾರ್ವಜನಿಕ/ಖಾಸಗಿ ಸ್ವತ್ತಿನಲ್ಲಿ ಪ್ರಕಟಿಸಬೇಕಾದಲ್ಲಿ ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರಗಳಿಂದ ಪಡೆದಿರುವ ಅನುಮತಿ/ನಿರಾಕ್ಷೇಪಣಾ ಪ್ರಮಾಣ ಪತ್ರ. | |

| | | |
|---|---|---|
| 8 | 3ನೇ ಕಕ್ಷಿದಾರನಿಗಾಗಿ ಕಾರ್ಮಿಕರಿಗಾಗಿ ವಿಮೆ ಮಾಡಿಸಿರುವ ಬಗ್ಗೆ | |
| 9 | ಉದ್ದೇಶಿತ ಜಾಹೀರಾತು ಫಲಕದ ಸ್ಥಳ, ರಸ್ತೆ/ಜಂಕ್ಷನ್‌ನಿಂದ ಇರುವ ದೂರ, ಭೂಮಿ/ಕಟ್ಟಡ ಮೇಲಿನ ಸ್ಥಾಪನೆ ಇತ್ಯಾದಿ ಸೂಚಿಸುವ ನಿವೇಶನ ನಕ್ಷೆ | |
| 10 | ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಪಡೆದ ವಿನ್ಯಾಸದ ದೃಢತೆ ಮತ್ತು ಸುರಕ್ಷತೆಯ ಪ್ರಮಾಣ ಪತ್ರ | |
| 11 | ಜಾಹೀರಾತು ಫಲಕವು ಒಂದು ವೇಳೆ ಪ್ರಕಾಶಿತವಿದ್ದಲ್ಲಿ ಎಸ್ಕಾಂನಿಂದ ಸ್ಥಾಪನೆಯು ಯಾವುದೇ ವಿದ್ಯುತ್ ಅಪಘಾತಕ್ಕೆ ಒಳಗಾಗುವುದಿಲ್ಲವೆಂದು ಪಡೆದ ಪ್ರಮಾಣ ಪತ್ರ | |

ಸ್ಥಳ:

ದಿನಾಂಕ:

ಅರ್ಜಿದಾರನ ಸಹಿ